ರೂರಲ್ ಏರಿಯಾನಲ್ಲಿ ಎಲ್ಲಿ ಬೋರ್‌ವೆಲ್ ಮಾಡಬೇಕು ಎಂದು ಇದ್ದೀರಿ ಅಲ್ಲೇ ಮಿಷನ್‌ಗಳನ್ನು ಇಟ್ಟು ಬೋರ್‌ವೆಲ್ ಹೊಡೆದಮೇಲೆ ರಿಗ್ ಮಿಷನ್‌ಗಳನ್ನು ತೆಗೆದುಕೊಂಡು ಬಂದುಬಿಡಿ. ಈ ಬಗ್ಗೆ ಸಂಬಂಧಪಟ್ಟ ಡಿಪಾರ್ಟ್‌ಮೆಂಟ್‌ಗೆ ಒಂದು ಆರ್ಡರ್ ಕೊಟ್ಟು ರಿಗ್ ಯಂತ್ರಗಳನ್ನು ಅಲ್ಲೇ ಇಟ್ಟು ಕೆಲಸ ಪೂರ್ಣಮಾಡಬೇಕು ಎಂದು ಹೇಳುತ್ತೀರಾ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಉಪಪ್ರಶ್ನೆ ಕೇಳುವುದಕ್ಕೆ ಬದಲಾಗಿ ಈ ರೀತಿ ಭಾಷಣ ಮಾಡಿದರೆ ಹೇಗೆ?

ಶ್ರೀ ಕೆ. ಪ್ರಭಾಕರ್.—ಆ ವ್ಯವಸ್ಥೆಯನ್ನು ಮಾಡಿದೆ. ಅಲ್ಲಿ ಅವಶ್ಯಕತೆ ಇದ್ದಾಗ ಮಿಷನ್‌ಗಳನ್ನು ವಾಪಸ್ ತರುವುದಿಲ್ಲ. ಅಲ್ಲಿ ಬೋರ್‌ವೆಲ್ ತೆಗೆದರೂ ನೀರು ಬರುವುದಿಲ್ಲ, ಇದರ ಅವಶ್ಯಕತೆ ಇಲ್ಲ ಎನ್ನುವ ಸೂಚನೆ ಇದೆ. ಒಂದು ವೇಳೆ ಬೋರ್‌ವೆಲ್ ತೆಗೆಯಲುಬೇಕು ಎಂದರೆ ಅದನ್ನು ಮುಗಿಸಿ, ಬೇರೆ ಕಡೆ ತೆಗೆಯಿರಿ ಎಂದೂ ಹೇಳುತ್ತೇವೆ.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ಸಮಾಜಿಗೆ ಹೋಗಬೇಕು. ನನ್ನ ಪ್ರಶ್ನೆ ಒಂದಿದೆ. ಅದನ್ನು ಈಗ ಕೇಳುವುದಕ್ಕೆ ಅವಕಾಶ ಕೊಟ್ಟರೆ ಮುಗಿಸಿಕೊಂಡು ಹೋಗುತ್ತೇನೆ.

ಅಧ್ಯಕ್ಷರು.—ನಾನು ಆರ್ಡರ್ ಪ್ರಕಾರ ಹೋಗಬೇಕಾಗಿದೆ. ಮಾನ್ಯ ಮಂತ್ರಿಗಳು ಕೌನ್ಸಿಲ್‌ಗೆ ಹೋಗಿರುವುದರಿಂದ ಮಾನ್ಯ ಎಂ. ಸಿ. ಬಸಪ್ಪನವರ ಪ್ರಶ್ನೆಯನ್ನು ಆ ಮೇಲೆ ತೆಗೆದುಕೊಳ್ಳೋಣ.

Increased Cost of Milk by Bangalore Dairy

131. SRI T.R. SHAMANNA (Basavanagudi).—Will the Minister for Animal Husbandry and Dairy Development be pleased to state.—

(*a*) whether the Bangalore Dairy has increased the cost of milk recently;

(*b*) whether there was a need for Increasing the cost of the milk;

(*c*) whether the Government is aware that the former Minister of Animal Husbandry had promised to cut the cost of milk when there is supply of milk to Dairy at the required quantity?

SRI DEVENDRAPPA GHALAPPA (Minister for Animal Husbandry and Dairy Development).—

(*a*) Yes. The increase is effective from 15th May 1978 to the end of July 1978.

(*b*) Yes.

(*c*) No such promise had been made. However, as seen from Press reports he, at one of his press conferences, had hinted at the possibility of stabilisation of the price at the rate then fixed in view of the then availability of milk in adequate quantities and improved efficiency of the Dairy;

ಶ್ರೀ ಟಿ. ಆರ್. ಶಾಮಣ್ಣ.— ಮಾನ್ಯ ಮಂತ್ರಿಗಳು ಉತ್ತರದಲ್ಲಿ "The increase is effective from 15th May 1978 to the end of July 1978" ಎಂದು ಕೊಟ್ಟಿದ್ದಾರೆ. ಹಾಲಿನ ದರ ಆಗಿಂದಾಗ್ಗೆ ಪೆಚ್ಚಾಗತಕ್ಕ ಅವಶ್ಯಕತೆ ಏನು ಈ ಸೀಸನ್‌ನಲ್ಲಿ ಹಾಲಿನ ದರ ಕಡಿಮೆ ಮಾಡುವುದಕ್ಕೆ ಏನನ್ನು ತೊಂದರೆಯಿದೆ?

† ಶ್ರೀ ದೇವೇಂದ್ರಪ್ಪ ಘಾಳಪ್ಪ.—ಮಾನ್ಯ ಅಧ್ಯಕ್ಷರೇ, ೧೯೭೪ನೇ ಇಸವಿಯಿಂದ ಲೀನ್ ಸೀಸನ್ ನಲ್ಲಿ ಮತ್ತು ಪ್ಲಷ್ ಸೀಸನ್‌ನಲ್ಲಿ ಕಂಪ್ಯಾರಟೀವ್ ರೇಟ್ ಇರುವ ಹಾಗೆ ಮಾಡಿ ಕೊಂಡು ಬಂದಿದ್ದಾರೆ ಮೊನ್ನೆ ತಾನೇ ಬೆಂಗಳೂರಿನಲ್ಲಿ ಎಲ್ಲಾ ಶಾಸಕರ ಜೊತೆ ಸಮಾಲೋಚನೆ ಮಾಡಿದ್ದೇನೆ, ಅವರು ಯಾವರೀತಿ ಮಾಡಬೇಕು ಎಂದು ಸಲಹೆಗಳನ್ನು ಕೊಟ್ಟಿದ್ದಾರೆ. ಬೆಂಗಳೂರು ಡೈರಿಗೆ ೭೦ ಸಾವಿರ ಲೀಟರ್ ಬರುತ್ತದೆ. ೧ಲಕ್ಷ ೨೦ ಸಾವಿರ ಲೀಟರ್ ಬೇಕಾಗುತ್ತದೆ. ೪೦ ರಿಂದ ೫೦ ಸಾವಿರ ಲೀಟರ್ ಮಿಲ್ಕ್ ಪೌಡರ್ ಮಾಡಲಿಕ್ಕೆ ಬೇಕಾಗುತ್ತದೆ. ಉಳಿದಿದ್ದನ್ನು ಬೇರೆ ಕಡೆಯಿಂದ ತರಿಸುತ್ತಿದ್ದೇವೆ. ಅದಕ್ಕೆ ಟ್ರಾನ್ಸ್‌ಪೋರ್ಟ್ ಚಾರ್ಜ್ ಬೀಳುತ್ತದೆ. ಆಕ್ಚುಯಲ್‌ಕಾಸ್ಟ್ ಒಂದು ಲೀಟರಿಗೆ ೨-೪೦ ಪೈಸೆಯಾಗುತ್ತದೆ. ಈ ಸಲ ೨-೧೦ ಪೈಸೆ ಮಾಡಿದ್ದೇವೆ. ೩೦ ಪೈಸೆ ಕಡಿಮೆ ಬೀಳುತ್ತದೆ. ಇದನ್ನು ತುಂಬಲು ಸರ್ಕಾರ ೩೬ ಸಾವಿರ ರೂಪಾಯಿಗಳ ಸಬ್ಸಿಡಿ ಕೊಟ್ಟಿದೆ. ಕಾರಣಾಂತರದಿಂದ ನಾವು ದರವನ್ನು ಹೆಚ್ಚು ಮಾಡಬೇಕಾಗಿದೆ.

ಶ್ರೀ ಟಿ.ಆರ್. ಶಾಮಣ್ಣ.—ಈಗ ಖಾಸಗಿ ಜನರು ಮನೆಯ ಹತ್ತಿರ ಕರೆದು ಒಂದು ಲೀಟರ್ ೨ ರೂಪಾಯಿ ೨-೧೦ ಪೈಸೆಗೆ ಕೊಡುತ್ತಾರೆ. ಡೈರಿಯಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ತರಿಸುತ್ತೀರಿ, ಆದರೂ ಕೂಡ ೩೦ ಪೈಸೆ ನಷ್ಟವಾಗುತ್ತದೆ ಎಂದು ಹೇಳುತ್ತೀರಿ. ಮಳೆಗಾಲದಲ್ಲಿ, ಸುಗ್ಗಿ ಕಾಲದಲ್ಲಿ ಹಾಲಿನ ಸರಭರಾಜು ಹೆಚ್ಚಾಗಿ ಆಗುತ್ತದೆ ಹಾಲು ಜಾಸ್ತಿ ಸಿಕ್ಕುವ ಕಾಲದಲ್ಲಿ ಹಾಲನ್ನು ತೆಗೆದು ಕೊಂಡು ಹಾಲಿನ ಪುಡಿ, ಬೆಣ್ಣೆ ಮುಂತಾದುವನ್ನು ಮಾಡಿಟ್ಟು ಕೊಂಡು, ಕಡಿಮೆ ಹಾಲು ಬರುವಾಗ ಬೇರೆ ಕಡೆಯಿಂದ ತರಿಸುವ ಬದಲಾಗಿ ಬೇಸಿಗೆ ಕಾಲದಲ್ಲಿ ಇದನ್ನೇ ಉಪಯೋಗಿಸಿ, ಹಾಲಿನ ದರ ಹೆಚ್ಚು ಆಗದ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಏನು ತೊಂದರೆಯಿದೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಮಾನ್ಯ ಸದಸ್ಯರ ಸಲಹೆ ಸೂಕ್ತವಾಗಿದೆ. ಲೀನ್ ಸೀಸನ್‌ನಲ್ಲಿ ದರವನ್ನು ಹೆಚ್ಚು ಕಡಿಮೆ ಮಾಡುವುದು ಬೇಡ ಎಂದು ಈಗಾಗಲೇ ಸರ್ಕಾರ ಪೌಡರ್ ಪ್ಲಾಂಟನ್ನು ಹಾಕಬೇಕು ಎಂದು ಯೋಚನೆಮಾಡಿ ಸ್ಯಾಂಕ್ಷನ್ ಮಾಡಿದೆ, ಆದರ ಕೆಲಸ ನಡೆಯುತ್ತಾ ಇದೆ. ಹೆಚ್ಚು ಹಾಲು ಬಂದಾಗ ಅದನ್ನು ಸಂಗ್ರಹಮಾಡಿ ಲೀನ್ ಸೀಸನ್‌ನಲ್ಲಾಗಲೀ, ಪ್ಲಷ್ ಸೀಸನ್‌ನಲ್ಲಾಗಲೀ ಪ್ಯೂಸನ್ನು ಕಾನ್‌ಸ್ಟಂಟಾಗಿ ಇಡಬೇಕು ಎಂದು ಸರ್ಕಾರದ ಕಾರ್ಯಕ್ರಮವಿದೆ. ಆಗಿಂದಾಗ್ಗೆ ಬಾಟ್ಲಿಂಗ್ ಮಿಷನ್‌ನ್ನು ಚೆಕ್‌ಮಾಡಿ ದುರಸ್ತಿ ಮಾಡುತ್ತಾ ಹೋಗಿದ್ದರೆ ನಷ್ಟ ಕಡಿಮೆಯಾಗುತ್ತಿತ್ತು. ಕಳೆದ ಅಧಿವೇಶನದಲ್ಲಿ ಬೆಂಗಳೂರಿನ ಶಾಸಕರೊಡನೆ ಮಾತನಾಡಿ, ಅವರ ಸಲಹೆಗಳನ್ನು ಪಡೆಯುತ್ತೇನೆಂದು ಹೇಳಿದ್ದೆ. ಆ ಪ್ರಕಾರ ಮೊನ್ನೆ ಶಾಸಕರನ್ನು ಕರೆದಿದ್ದೆ, ಅವರು ಸಲಹೆಗಳನ್ನು ಕೊಟ್ಟಿದ್ದಾರೆ. ಬಾಟ್ಲಿಂಗ್ ಮಿಷನ್‌ನ್ನು ಜವರ್‌ಆಲ್ ಮಾಡುವ ಕಾರ್ಯಕ್ರಮ ಕೂಡ ತೆಗೆದುಕೊಳ್ಳುತ್ತಾ ಇದ್ದೇವೆ. ಇವೆಲ್ಲಾ ಕಾರ್ಯಕ್ರಮಗಳಿಂದ ಓವರ್‌ಹೆಡ್ ಚಾರ್ಜ ಬೀಳುತ್ತದೆ. ಟ್ರಾನ್ಸ್‌ಪೋರ್ಟೇಷನ್ ಚಾರ್ಜನ್ನು ಕಡಿಮೆಮಾಡಿದರೆ ಖಂಡಿತವಾಗಿ ಹಾಲನ್ನು ಕಡಿಮೆ ಬೆಲೆಯಲ್ಲಿ ಸರಬರಾಜು ಮಾಡುವುದಕ್ಕೆ ಸಾಧ್ಯವಾಗುತ್ತದೆ, ಡೈರಿ ಆಸಕ್ತಿ ವಹಿಸಿ ಕೆಲಸ ಮಾಡುತ್ತದೆ.

ಶ್ರೀ ಮಳ್ಳೂರು ಆನಂದರಾವ್.—ಡೈರಿ ಹಾಲನ್ನು ಕೊಂಡುಕೊಳ್ಳುವ ಬೆಲೆ ಎಷ್ಟು. ಬೆಂಗಳೂರಿನಲ್ಲಿ ಹಾಲಿನ ಕೊರತೆ ಇಲ್ಲ. ಮಾನ್ಯ ಶಾಮಣ್ಣನವರು ಹೇಳಿದಹಾಗೆ ಕರೆದ ಹಾಗೆಯೇ ೨ ರೂಪಾಯಿಗೆ ಒಂದು ಲೀಟರ್ ಹಾಲು ಕೊಡುತ್ತಾರೆ. ಡೈರಿಯವರು ೨-೧೦ ಪೈಸೆಗೆ ಒಂದು ಲೀಟರ್ ಹಾಲು ಕೊಟ್ಟು ಅದರ ಮೇಲೆ ೩೦ ಪೈಸೆ ಸಬ್ಸಿಡಿ ಮಾಡುತ್ತಾರೆ ಎಂದರೆ ನಿಮ್ಮ ಡೈರಿ ಕೆಲಸ ಮಾಡುವುದರಲ್ಲಿ ಏನೋ ದೋಷವಿದೆಯೆನ್ನುವುದನ್ನು ಒಪ್ಪಿಕೊಳ್ಳುತ್ತೀರಾ? ಎಲ್ಲೋ ಅವಶ್ಯಕತೆ ಇಲ್ಲದೇ ಇರುವ ಕಡೆ ಹಣ ಖರ್ಚಾಗುತ್ತದೆ. ಆ ಹಣವನ್ನು ಹಾಲಿನ ಉತ್ಪಾದನೆ ಮಾಡುವವರಿಗೂ ಕೊಡುವುದಿಲ್ಲ. ಅದು ಕೊಂಡು ಕೊಳ್ಳುವವರ ತಲೆಮೇಲೆ ಹೋಗುತ್ತದೆ. ಆದುದರಿಂದ ಡೈರಿ ಆಡ್ಮಿನಿಸ್ಟ್ರೇಷನ್ ಅನ್ನು ಟೋನಪ್‌ಮಾಡಿ ಕನಿಷ್ಟ ೨ ರೂಪಾಯಿಗೆ ಒಂದು ಲೀಟರ್ ಹಾಲು ಸಿಕ್ಕುವಂತೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಈಗ ನಾವು ಕೊಂಡುಕೊಳ್ಳತಕ್ಕದ್ದು ೧-೭೦ ಪೈಸೆಯಿಂದ ೧-೮೦ ಪೈಸೆವರೆಗೆ. ೬೦ ಪೈಸೆ ಓವರ್ ಹೆಡ್ ಚಾರ್ಜ ಬರುತ್ತದೆ. ಬಾಟ್ಲಿಂಗ್ ಮಿಷನ್ ರಿಪೇರಿ ಎಲ್ಲಾ ಬರುತ್ತದೆ. ಸಾವಿರಾರು ಬಾಟಲ್ಸ್ ಹೊಡೆಯುತ್ತಾ ಇರುತ್ತದೆ. ಈಗ ಪ್ಯಾಕೇಜ್ ಟೈಪ್ ಪ್ಲಾಸ್ಟಿಕ್ ಬ್ಯಾಗನ್ನು ಮಾನ್ಯ ಶಾಮಣ್ಣನವರು ಮತ್ತು ರಾಮದೇವ್ ಅವರು ನೋಡಿದ್ದಾರೆ. ಪ್ಲಾಸ್ಟಿಕ್ ಬ್ಯಾಗ್ ಗಳಲ್ಲಿ ಹಾಲನ್ನು ಸರಬರಾಜು ಮಾಡಬೇಕೆಂದಿದ್ದರೆ. ಅಡಲ್ಟರೇಷನ್ ಬರದಂತೆ ಕೂಡ ನಾವು ಮಾಡಿದ್ದೇವೆ. ದೋಷಗಳೇನಿವೆ ಅದನ್ನು ಸರಿಮಾಡಿಸಬೇಕು. ಇದರ ಬಗ್ಗೆ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದ್ಕೊ

ಕೊಂಡಿದ್ದೇವೆ. ಮುಂದೆ ಬರತಕ್ಕ ದಿನಗಳಲ್ಲಿ ಲೀನ್‌ಸೀಸನ್‌ನಲ್ಲಿ ಕನ್‌ಸ್ಯೂಮರ್ಸ್‌ಗೆ ರೇಟ್ ಹೆಚ್ಚು ಕಡಿಮೆಯಾಗಬಾರದು ಎಂದು ಡಕ್ಲೇಟ್ ಮಾಡಿದೆ. ಬರತಕ್ಕ ದಿನಗಳಲ್ಲಿ ಇನ್ನೇನಾದರೂ ಸಲಹೆಗಳಿವ್ಯ ಅದನ್ನು ಸೂಚಿಸಬೇಕು ಎಂದು ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಮಳ್ಳೂರ್ ಆನಂದರಾವ್.—ಹಾಲಿನ ಬೆಲೆಯನ್ನು ಕಡಿಮೆ ಮಾಡುತ್ತೇವೆಂದು ಹೇಳಿದಿರಿ. ಎಷ್ಟು ಪೈಸೆ ಕಡಿಮೆ ಮಾಡುತ್ತೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಎಷ್ಟು ಪೈಸೆ ಕಡಿಮೆ ಮಾಡುತ್ತೇವೆ ಎನ್ನುವುದರ ಬಗ್ಗೆ ಈ ತಿಂಗಳ ಅಂತ್ಯದಲ್ಲಿ ಒಂದು ಮೀಟಿಂಗ್ ಕರೆದು ರಿಪ್ಲೈ ಮಾಡಿದ ನಂತರ ತಿಳಿಸುತ್ತೇವೆ.

ಶ್ರೀ ಪಿ. ರಾಮುದೇವ್.—ಡೈರಿ ಹಾಲನ್ನು ಕುಡಿಯುವವರಲ್ಲಿ ನಾನು ಒಬ್ಬ. ಅದಕ್ಕಾಗಿ ಇಷ್ಟು ಚೀನ್ನಾಗಿರುತ್ತೇನೆ. ಆದರೆ ನಿನ್ನೆದೊಂದು ಪ್ರಶ್ನೆ ನಮ್ಮ ಮಂತ್ರಿಗಳು ಡೈರಿ ಹಾಲಿನ ಗುಣಮಟ್ಟವನ್ನು ಹೇಳುತ್ತಲೇ ಇದ್ದಾರೆ. ಮೊನ್ನೆ ನಮ್ಮ ಮನೆಯಲ್ಲಿ ಮೊಸರು ಮಾಡಿದಾಗ ಅದರ ತಳದಲ್ಲಿ ಒಂದು ರೀತಿಯಾದ ಗಟ್ಟಿಯಾದ ಅಂಶ ನಿಂತು ದುರನಾತ ಉಂಟಾಗಿತ್ತು ಆದ್ದರಿಂದ ಅದರ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ತಿಳಿಸಬೇಕು?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಬೇರೆ ಬೇರೆ ಕಡೆಯಿಂದ ಬರತಕ್ಕಂಥ ಹಾಲು ಮತ್ತು ಪೌಡರ್‌ನ್ನು ರೀಕಾನ್‌ಸ್ಟಿಟ್ಯೂಟ್ ಮಾಡುವಾಗ ಮತ್ತು ಫ್ಯಾಟರ್ ಸ್ವಲ್ಪ ತೊಂದರೆಯಾಗುತ್ತದೆ. ಆದ್ದರಿಂದ ಡೈರಿಯ ಒಳಗಡೆ ಪಾಶ್ಚ್ಯೂರಿಂಗ್ ಮಾಡುವಾಗ ಸರಿಯಾಗಿ ಚೆಕಪ್ ಮಾಡಿ ಕಳುಹಿಸಲು ಏರ್ಪಾಡು ಮಾಡುತ್ತೇನೆ

ಶ್ರೀ ಕೆ.ಎಚ್. ಹನುಮೇಗೌಡ.—ಹಳ್ಳಿಯವರಿಂದ ಅಂದರೆ ರೈತರಿಂದ ತಾವು ಹಸುವಿನ ಹಾಲನ್ನು ರೂ. ೧–೫೦ ಅಥವಾ ರೂ. ೧–೪೦ ಕ್ಕೆ ಕೊಂಡು ಕೊಳ್ಳುತ್ತೀರಿ, ಎಮ್ಮೆಹಾಲನ್ನು ರೂ. ೧–೪೦ ಅಥವಾ ರೂ. ೧–೫೦ ಪೈಸೆಗೆ ಕೊಂಡು ಕೊಳ್ಳುತ್ತೀರಿ. ಕಳೆದ ವರ್ಷದಿಂದ ತಿಂಡಿ ತಿನಸುಗಳ ಬೆಲೆ ಜಾಸ್ತಿಯಾಗಿರುವುದರಿಂದ ರೈತರು ಬೆಲೆಯನ್ನು ಜಾಸ್ತಿಮಾಡಬೇಕೆಂದು ಎಷ್ಟೋ ಬಾರಿ ಕೇಳಿಕೊಂಡಿರುತ್ತಾರೆ. ಆದ್ದರಿಂದ ತಾವು ನೋಫ್ಯಾಫಿಟ್ ನೋ ಲಾಸ್ ಬೇಸಿಸ್ ಮೇಲೆ ಒಂದು ರೀಸನಬಲ್ ರೇಟನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಶ್ರೀಮಾನ್ ಹನುಮೇಗೌಡರು ಹೇಳತಕ್ಕಂಥ ವಿಷಯ ರೈತರ ಬಗ್ಗೆ ಎಷ್ಟು ಕಳಕಳಿಯನ್ನು ಹೊಂದಿರುತ್ತಾರೆನ್ನುವುದು ವ್ಯಕ್ತವಾಗುತ್ತದೆ. ಅದರಂತೆ ನಾವು ಕೂಡ ರೈತರಿಗೆ ಎಷ್ಟು ದುಡ್ಡನ್ನು ಕೊಡಲಿಕ್ಕೆ ಸಾಧ್ಯವೊ ಅಷ್ಟನ್ನು ಕೊಡಲೇಬೇಕು ಎಂದು ಹೇಳುವವರಲ್ಲಿ ನಾನು ಒಬ್ಬ. ಆದ್ದರಿಂದ ಅವರಿಗೆ ಎಷ್ಟರಮಟ್ಟಿಗೆ ಸಹಾಯ ಮಾಡಬಹುದು ಏನ್ನುವುದರ ಬಗ್ಗೆ ವರ್ಕ್‌ಔಟ್ ಮಾಡುತ್ತಿದ್ದೇವೆ. ಅದಾದನಂತರ ಎಷ್ಟು ಬೆಲೆಯನ್ನು ಕೊಡಲು ಸಾಧ್ಯವೆನ್ನುವುದನ್ನು ತಿಳಿಸುತ್ತೇನೆ.

ಶ್ರೀ ಸಿ.ಎಂ. ಇಬ್ರಾಹಿಂ.—ಬೆಂಗಳೂರು ಹಾಲು ಡೈರಿ ಬಗ್ಗೆ ಮೊನ್ನೆ ತಾನೆ ನಡೆದಂಥ ಸಭೆಯಲ್ಲಿ ತೀರ್ಮಾನ ಮಾಡಿದಂತೆ, ಡೈರಿಯ ಹಾಲಿನ ದರವನ್ನು ಹೆಚ್ಚಿಸಬೇಕಾದರೆ ಬಳಕೆದಾರರ, ರಾಸಕರ ಮತ್ತು ಮಿಲ್ಕ್ ಪ್ರೊಡ್ಯೂಸರ್‌ರವರ ಒಂದು ಸಮಿತಿಯನ್ನು ಮಾಡಲು ಆಲೋಚನೆ ಮಾಡುತ್ತೀರಾ? ಮತ್ತು ಯಾವಾಗ ಮಾಡುತ್ತೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಇದರ ಬಗ್ಗೆ ಸರ್ಕಾರದವರು ಯಾವರೀತಿ ಮಾಡಬೇಕು, ಹೇಗೆ ಮಾಡಬೇಕು ಏನ್ನುವುದರಬಗ್ಗೆ ತೀರ್ಮ ಆಲೋಚನೆಯಲ್ಲಿದೆ.

ಶ್ರೀ ಘಟ್ಟಿ ಚಂದ್ರಶೇಖರ್.—ತಮ್ಮ ಡೈರಿಯ ಹಾಲಿನ ಗುಣಮಟ್ಟವನ್ನು ತಿಳಿದು ಕೊಳ್ಳಲು ಲೆಜಸ್ಲೇಚರ್ಸ್‌ಗೂ ಒಂದೊಂದು ಬಾಟಲ್ ಹಾಲನ್ನು ಪಯಪಿಟ್ಟು ಕಳುಹಿಸಲು ಏರ್ಪಾಡು ಮಾಡುತ್ತೀರಾ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಆದು ಸಾಧ್ಯವಾಗುವುದಿಲ್ಲ.

ಶ್ರೀ ಟಿ.ಆರ್. ಶಾಮಣ್ಣ.—ಕೆಲವು ವರ್ಷಗಳ ಕೆಳಗೆ ಅನೇಕ ಟನ್ ಬೆಣ್ಣೆಯನ್ನು ಸುಟ್ಟುಹಾಕಿದೆವು, ಕೆಟ್ಟುಹೋದ ಹಾಲನ್ನು ಮೋರಿಗೆ ಸುರಿದೆವು ಎಂದು ಹೇಳಿದಿರಿ. ಇದೇರೀತಿ ವೇಸ್ಟ್ ಆಗುತ್ತಿದ್ದರೆ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೆ? ಮತ್ತು ಡೈರಿಯಲ್ಲಿ ಆಗುತ್ತಾ ಇರತಕ್ಕಂಥ ನಷ್ಟವನ್ನು ತಪ್ಪಿಸಿ ಕನಸ್ಯೂಮರ್ಸ್‌ಗೂ ಮತ್ತು ಪ್ರೊಡ್ಯೂಸರ್‌ಗೂ ಅನುಕೂಲವಾಗುವಂಥ ಕಾರ್ಯಕ್ರಮವನ್ನು ಏತಕ್ಕೆ ತೆಗೆದುಕೊಳ್ಳಬಾರದೆಂದು ಹೇಳುತ್ತೇನೆ.

ಶ್ರೀ ದೇವೆಂದ್ರಪ್ಪ ಘಾಳಪ್ಪ.—ಸಾಕಷ್ಟು ಹಾಲು ಸಿಕ್ಕದೆ ಇರುವ ಸಂದರ್ಭದಲ್ಲಿ ಬೆಣ್ಣೆಯನ್ನಾಗಲಿ, ಮೊಸರನ್ನಾಗಲಿ ವೇಸ್ಟ್ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಕನ್‌ಸ್ಯೂಮರ್ಸ್‌ಗೂ ಮತ್ತು ಪ್ರೊಡ್ಯೂಸರ್‌ಗೂ ಒಂದು ರೀಸನಬಲ್ ರೇಟ್ ಕೊಡಬೇಕೆಂದು ಹೇಳಿದ್ದರ ಬಗ್ಗೆ ಪರ್ಕಜೆಟ್ ಮಾಡಿ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Shifting of Arrack and Toddy Shops in Bangalore.

533. SRI C. M. IBRAHIM (Shivajinagar).—Will the Minister for Labour and Excise be pleased to state :—

(*a*) whether it is not a fact that complaints have been received from the public and MLAs for shifting of Arrack and Toddy shops at Bangalore City Broadway road ?

(*b*) if so, what action has been taken by the Government on these complaints ?

(*c*) if not. the reasons for the delay ?

SRI R.S.PATIL (Minister for Labour and Excise).—

(*a*) Yes.

(*b*) No action is considered necessary.

(*c*) In view of reply to (b) the question does not arise.

ಶ್ರೀ ಸಿ.ಎಂ. ಇಬ್ರಾಹಿಂ.—ನಾನು ಕೇಳುವ ಪ್ರಶ್ನೆಯ ಬಗ್ಗೆ ದೂರು ಬಂದಿರುತ್ತದೆ ನಿಜ ಎಂದು ಹೇಳಿರುತ್ತೀರಿ. ಆದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಕಂಡುಬಂದಿರುತ್ತದೋ ಇಲ್ಲವೋ ಎಂಬುದನ್ನು ವಿವರವಾಗಿ ಹೇಳುತ್ತೀರಾ ?

† ಶ್ರೀ ಆರ್.ಎಸ್. ಪಾಟೀಲ್.—ಬೆಂಗಳೂರು ನಗರದಲ್ಲಿರುವ ಬ್ರಾಡ್ವೆ ರೋಡಿನಲ್ಲಿರುವ ಟ್ಯಾಡಿ ಷಾಪ್ ಕಂಟ್ರೊಮೆಂಟ್ ಏರಿಯಾದಲ್ಲಿ ಬರುತ್ತದೆ. ಇದು ಮದ್ರಾಸ್ ರಾಜ್ಯದಲ್ಲಿತ್ತು. ಸುಮಾರು ೪೫ ವರ್ಷಗಳಿಂದಲೂ ಈ ಷಾಪ್ ನಡೆಯುತ್ತದೆ. ಇತ್ತೀಚೆಗೆ ರಿಪ್ರಿಕ್ಷನ್ ಬಂದಮೇಲೆ ಅವಶ್ಯಕವಾಗಿ ಇನ್ ಪೆಸ್ಟಿಗೇಷನ್ ಮಾಡಿದಾಗ ಕಡ್ಡಿಗನಪಳ್ಳಿ ಅಂಬಾಜಿದುರ್ಗ ಈ ಭಾಗಗಳಲ್ಲಿ ಬೂಟ್‌ಲೆಗರ್ಸ್ ಬಹಳವಾಗಿದ್ದುದು ಸರ್ಕಾರಕ್ಕೆ ತಿಳಿಯಿತು. ಒಮ್ಮೆ ಆ ಪ್ರದೇಶದಲ್ಲಿ ರೈಡ್ ಮಾಡಿದಾಗ ನೂರಾರು ಲೀಟರ್ಸ್ ಕಳ್ಳಬಟ್ಟಿ ಸಾರಾಯಿ ಸಿಕ್ಕಿತು. ಆದ್ದರಿಂದ ಡೆಪ್ಯುಟಿ ಕಮಿಷನರ್, ಎಕ್ಸೈಸ್ ಕಮಿಷನರ್ ಮತ್ತು ಪೋಲೀಸ್ ಇನ್‌ಸ್ಪೆಕರ್ ಜೊತೆಯಲ್ಲಿ ಇನ್‌ಸ್ಪೆಕ್ಷನ್ ಮಾಡಿದಾಗ ಆ ಟ್ಯಾಡಿ ಷಾಪನ್ನು ಸ್ಥಳಾಂತರಿಸುವುದು ಸೂಕ್ತವಲ್ಲವೆಂದು ಅವರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರಿಂದ ಮತ್ತು ಆ ಕ್ಷೇತ್ರದಲ್ಲಿರತಕ್ಕಂಥ ಜನರು ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿ ಇದನ್ನು ಸ್ಥಳಾಂತರಿಸುವುದರಿಂದ ಕಳ್ಳಭಟ್ಟಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆಂದು ಇದನ್ನು ಕುಡಿದು ಜನರು ಆರೋಗ್ಯವನ್ನು ಕೆಡಿಸಿಕೊಳ್ಳುತ್ತಾರೆಂದು ಆದ್ದರಿಂದ ದಯವಿಟ್ಟು ಇದನ್ನು ಅಲ್ಲೇ ಮುಂದುವರಿಸಿಕೊಂಡು ಹೋಗಬೇಕು ಎಂದು ಹೇಳಿದರು.